ಕರ್ನಾಟಕ ಸರ್ಕಾರ

ಎಸ್.ಟಿ.ಡಿ : 08224
ಕಛೇರಿ : 253585
ಈ-ಮೇಲ್ : acfkollegalwl@gmail.com

ಕರ್ನಾಟಕ ಅರಣ್ಯ ಇಲಾಖೆ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಕೊಳ್ಳೇಗಾಲ ವನ್ಯಜೀವಿ ವಿಭಾಗ, ಕೊಳ್ಳೇಗಾಲ

ಸಂಖ್ಯೆ:ಎಸಿಎಫ್/ಕೆಎಸ್‌ಡಿ/ಟೆಂಡರ್/ಸಿಆರ್-1/2026-27 ದಿನಾಂಕ: 22.06.2026

## 2026-27 ನೇ ಸಾಲಿಗೆ ಮಲೈ ಮಹದೇಶ್ವರ ವನ್ಯಜೀವಿ ವಿಭಾಗದ ವಿವಿಧ ವಲಯಗಳಲ್ಲಿ ರಸ್ತೆಬದಿ ನೆಡುತೋಪು ಬೆಳೆಸಲು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರು ಪ್ರಕಟಣೆ

ಸಾರ್ವಜನಿಕರ ಅವಗಾಹನೆಗಾಗಿ ಈ ಮೂಲಕ ಪ್ರಕಟಿಸುವುದೇನೆಂದರೆ, ಈ ಮುಂದೆ ಕಾಣಿಸಲಾದ ದಿನಾಂಕ ಮತ್ತು ವೇಳೆಯಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಕೊಳ್ಳೇಗಾಲ ವನ್ಯಜೀವಿ ಉಪ ವಿಭಾಗ, ಕೊಳ್ಳೇಗಾಲ ಇವರ ಕಛೇರಿಯಲ್ಲಿ ಮಲೈ ಮಹದೇಶ್ವರ ವನ್ಯಜೀವಿ ವಿಭಾಗದ ವಿವಿಧ ವಲಯಗಳಲ್ಲಿ ರಸ್ತೆಬದಿ ನೆಡುತೋಪು ಬೆಳೆಸಲು ಹಾಗೂ ನರ್ಸರಿಯಲ್ಲಿ ಸಸಿಗಳನ್ನು ಬೆಳೆಸುವ ಕಾಮಗಾರಿ ಹಾಗೂ ಇತರೇ ಕಾಮಗಾರಿ ಕೆಲಸಗಳಿಗೆ 2026-27 ನೇ ಸಾಲಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಟೆಂಡರು ಕರೆಯಲಾಗಿರುತ್ತದೆ. ಆಸಕ್ತ ನೋಂದಾಯಿತ ಗುತ್ತಿಗೆದಾರರು ಟೆಂಡರನಲ್ಲಿ ಭಾಗವಹಿಸಬಹುದಾಗಿದೆ.

| | | |
|---|---|---|
| 1 | ಟೆಂಡರು ಸ್ಥಳ | ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಕೊಳ್ಳೇಗಾಲ ವನ್ಯಜೀವಿ ಉಪ ವಿಭಾಗ, ಕೊಳ್ಳೇಗಾಲ |
| 2 | ಟೆಂಡರ್‌ನ ಬಗ್ಗೆ ಸ್ಪಷ್ಟೀಕರಣ/ ಮಾಹಿತಿಯ ಬಗ್ಗೆ | 03.07.2026 ಮಧ್ಯಾಹ್ನ 4.00 ಗಂಟೆಗೆ |
| 3 | ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ | 04.07.2026 ಮಧ್ಯಾಹ್ನ 4.00 ಗಂಟೆಗೆ |
| 4 | ತಾಂತ್ರಿಕ ಬಿಡ್ ತೆರೆಯುವ ದಿನಾಂಕ | 06.07.2026 ಮಧ್ಯಾಹ್ನ 4.00 ಗಂಟೆಗೆ |
| 5 | ಆರ್ಥಿಕ ಬಿಡ್ ತೆರೆಯುವ ದಿನಾಂಕ | 07.07.2026 ಮಧ್ಯಾಹ್ನ 4.00 ಗಂಟೆಗೆ |
| 6 | ಟೆಂಡರ ವೆಬ್‌ಸೈಟ್ | https://kppp.karnataka.gov.in |
| 7 | ಟೆಂಡರ ವಿವರ | ಅನುಬಂಧ-1 ರಲ್ಲಿ ಲಗತ್ತಿಸಿದೆ. |

<u>ಅನುಬಂಧ–1</u>

| ಯೂನಿಟ್ ನಂ | ಕಾಮಗಾರಿ ವಿವರ | ಪ್ರಮಾಣ | | ಅಂದಾಜು ಮೊತ್ತ | ಇ.ಎಂ.ಡಿ. ಮೊಬಲಗು 2.50% |
|---|---|---|---|---|---|
| **I** | **4406-Capital Outlay on Forestry & Wildlife-01-Forestry-101-0-04-Afforestation on Non Forest Areas - 132 Other Capital Expenses (RSP) during 2026-27** | | | | |
| 1 | Raising of Monsoon Plantation at Mullur bypass to Mullur of Kollegal Buffer Range during 2026-27 under RSP **(Tender reserved for CAT-II(A) category contractors only)** | 1.00 | Km. | 3,45,150 | 8,630 |
| 2 | Raising of Monsoon Plantation at Hosa Hampaapura channel to Mudigunda channel of Kollegal Buffer Range during 2026-27 under RSP | 2.00 | Km. | 6,90,300 | 17,300 |
| 3 | Raising of Monsoon Plantation at Uddanuru to G.K.Hosuru of Hanur Buffer Range during 2026-27 under RSP | 3.00 | Km. | 10,35,450 | 25,900 |

ಈ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿ ವಿವರವಾದ ಟೆಂಡರ ಪ್ರಕಟಣೆಯನ್ನು ಕಛೇರಿ ವೇಳೆಯಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಮಲೈ ಮಹದೇಶ್ವರ ವನ್ಯಜೀವಿ ವಿಭಾಗ, ಕೊಳ್ಳೇಗಾಲ ಇವರ ಕಛೇರಿಯಿಂದ ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ 08224–252027 ಮೂಲಕ ಪಡೆಯಬಹುದು.

**ನೆಡುತೋಪು ಬೆಳೆಸುವ ಕಾಮಗಾರಿ ಜೊತೆಗೆ ಸಸಿ ಬೆಳೆಸುವುದು ಹಾಗೂ ಸಸಿಗಳನ್ನು ನಿರ್ವಹಣೆ ಮಾಡುವ ಕಾಮಗಾರಿಗಳನ್ನು ನಿರ್ವಹಿಸುವುದು ಹಾಗೂ ನೆಡುತೋಪುಗಳ ನಿರ್ವಹಣೆ ಕಾಮಗಾರಿ**

(1) 2026–27 ನೇ ಸಾಲಿನಲ್ಲಿ ಮಾನ್ಸೂನ್ ನೆಡುತೋಪು ಬೆಳೆಸುವ ಕಾಮಗಾರಿ ಜೊತೆಗೆ ಸಸಿ ಬೆಳೆಸುವ ಕಾಮಗಾರಿಗಳನ್ನು ಋತುಮಾನಕ್ಕನುಗುಣವಾಗಿ ನಿರ್ವಹಿಸುವುದು.

(2) **ಸಸಿಗಳನ್ನು ಬೆಳೆಸುವುದು** – ಪಾಲಿಥಿನ್ ಚೀಲಗಳಲ್ಲಿ ಅಂದಾಜು ಪಟ್ಟಿಯಲ್ಲಿ ಮಂಜೂರಾದ ಪ್ರಕಾರ ನಿರ್ದಿಷ್ಟ ಪ್ರಮಾಣದಲ್ಲಿ ಸಗಣಿ ಗೊಬ್ಬರ ಮತ್ತು ಕೆಂಪುಮಣ್ಣಿನ ಮಿಶ್ರಣಗಳನ್ನು ನಿಯಮಾನುಸಾರ ತುಂಬುವುದು, ಹಾಗೂ ಸದರಿ ಮಿಶ್ರಣದ ಗುಣಮಟ್ಟವು ಉತ್ತಮವಾಗಿರಬೇಕು, ಸಸಿಗಳಿಗೆ ದಿನಾಲು ನೀರು ಹಾಕುವುದು, ಕಳೆ ತೆಗೆಯುವುದು, ಸ್ಥಳಾಂತರಿಸಿ ಎತ್ತರವಾರು ಜೋಡಿಸುವುದು, ಔಷಧಿ ಸಿಂಪಡಿಸುವುದು, ನೆರಳಿನ ಹಂದರ ಅಳವಡಿಸುವುದು.

**ಮೇಲ್ಕಂಡ ಋತುಮಾನದ ಕೆಲಸಗಳನ್ನು ಪ್ಯಾಕೇಜ್ ಆಫ್ ಪ್ರಾಕ್ಟೀಸ್ ಪ್ರಕಾರ ತಾಂತ್ರಿಕ ಸಲಹೆಗನುಗುಣವಾಗಿ ನಿರ್ವಹಿಸುವುದು.**

**ತಾಂತ್ರಿಕ ಬಿಡ್ ಸಲ್ಲಿಸುವವರು ಕೆಳಗೆ ನಮೂದಿಸಿದ ದಾಖಲಾತಿಗಳನ್ನು ತಪ್ಪದೆ ಅಪಲೋಡ್ ಮಾಡಬೇಕು.**

ಎ) 2026–27 ನೇ ಸಾಲಿನಲ್ಲಿ ಅರಣ್ಯ ಇಲಾಖೆಯ ವಿಭಾಗದಲ್ಲಿ ಈ ಟೆಂಡರ್ ಪ್ರಕಟಣೆಯ ಪೂರ್ವದಲ್ಲಿ ಅರಣ್ಯ ಗುತ್ತಿಗೆದಾರರೆಂದು ನೊಂದಾಯಿಸಿದ ಪ್ರಮಾಣ ಪತ್ರದ ಪ್ರತಿ.

ಬಿ) ಗುತ್ತಿಗೆದಾರರು ಈ ಹಿಂದೆ ಇದೇ ರೀತಿಯ ಅರಣ್ಯೀಕರಣ ಕಾಮಗಾರಿಗಳನ್ನು ಕನಿಷ್ಠ ಹಿಂದಿನ (1) ವರ್ಷ ನೆಡುತೋಪು ಬೆಳೆಸುವ ಜೊತೆಗೆ ಸಸಿ ಬೆಳೆಸುವ ಕಾಮಗಾರಿ ಒಳಗೊಂಡಂತೆ ಕನಿಷ್ಠ ಹಿಂದಿನ (1) ವರ್ಷ ಕಾಮಗಾರಿಗಳನ್ನು ಕೈಗೊಂಡಿರುವ ಕುರಿತು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಅಥವಾ ಮೇಲ್ಪಟ್ಟ ಅಧಿಕಾರಿಗಳಿಂದ ಪಡೆದ ಅನುಭವ ಧೃಡೀಕರಣ ಪತ್ರ ಲಗತ್ತಿಸಿರಬೇಕು. (ಇದೇ ರೀತಿಯ ನೆಡುತೋಪು ಬೆಳೆಸುವ ಕಾಮಗಾರಿ ಜೊತೆಗೆ ಸಸಿ ಬೆಳೆಸುವ ಕಾಮಗಾರಿಗಳನ್ನು ಟೆಂಡರ್ ಮುಖಾಂತರ (Prime Contractor) ಟೆಂಡರ್ ಮೊತ್ತದ ಕನಿಷ್ಠ ಶೇಕಡ 50% ರಷ್ಟು ಮೊತ್ತಕ್ಕೆ ಕಾಮಗಾರಿ ಧೃಡೀಕರಣ ಪತ್ರ ಲಗತ್ತಿಸಬೇಕು)

ಸಿ) ಚಾಲ್ತಿಯಲ್ಲಿರುವ ಆದಾಯ ತೀರಿಕೆ ಪತ್ರದ ಧೃಢೀಕೃತ ಪತ್ರ (Present Income Tax Clearance certified copy)

ಡಿ)2024–25 ಮತ್ತು 2025–26 ನೇ ಸಾಲಿನಲ್ಲಿ ಅರಣ್ಯೀಕರಣ ಕಾಮಗಾರಿಗಳನ್ನು ನಿರ್ವಹಿಸಿದ್ದಕ್ಕೆ ಆರ್ಥಿಕ ಚಲಾವಣೆ ಮಾಡಿದ ಸಾಮರ್ಥ್ಯವನ್ನು ದೃಢೀಕರಿಸುವ ದಾಖಲಾತಿ ಪ್ರತಿಗಳು (Financial Turnover capability) They should be achieved in at least two financial years, a minimum annual financial turnover i.e., usually not less than two times the estimated amount under the contract.

ಇ) ಟೆಂಡರ್ ಕೆಲಸದ ಅವಧಿ ಮುಗಿಯುವವರೆಗೆ ಚಾಲ್ತಿಯಲ್ಲಿರುವ ಸಾಲ ತೀರುವಳಿ ಶಕ್ತಿಪತ್ರವನ್ನು ಕಂದಾಯ ಇಲಾಖೆ ಅಥವಾ ರಾಷ್ಟ್ರೀಕೃತ ಬ್ಯಾಂಕಿನಿಂದ ಪ್ರತಿ ಕೆಲಸದ ಶೇಕಡ 30ರಷ್ಟು ಮೊತ್ತಕ್ಕೆ ಪಡೆದು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್ಲೋಡ್ ಮಾಡಬೇಕು.

**ನೆಡುತೋಪು ಕಾಮಗಾರಿ ಜೊತೆಗೆ ಸಸಿ ಬೆಳೆಸುವ ಕಾಮಗಾರಿ ನಿರ್ವಹಿಸುವುದು**

1) 2026–27 ನೇ ಸಾಲಿನಲ್ಲಿ ಕೈಗೊಳ್ಳುವ ನೆಡುತೋಪು ಕಾಮಗಾರಿ ಜೊತೆಗೆ ಸಸಿ ಬೆಳೆಸುವ ಕಾಮಗಾರಿಗಳನ್ನು 28–02–2027 ಒಳಗೆ ಪೂರ್ಣಗೊಳಿಸತಕ್ಕದ್ದು.

**ಇಲಾಖಾ ಮೂಲಕ ಸರಬರಾಜು ಮಾಡುವ ಚೀಲಗಳಲ್ಲಿ ಸಸಿಗಳನ್ನು ಬೆಳೆಸುವುದು**

2) ಗುತ್ತಿಗೆದಾರರು ಸಸಿಗಳನ್ನು ಬೆಳೆಸುವಾಗ ಸಂಬಂಧಿಸಿದ ವಲಯ ಅರಣ್ಯಾಧಿಕಾರಿಗಳು / ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ನಿರ್ದೇಶನ ಹಾಗೂ ಸಲಹೆಯಂತೆ/ ಮಾದರಿ ಡಾಟಾಶೀಟ್‌ನಂತೆ, ವಲಯ ಅರಣ್ಯಾಧಿಕಾರಿಗಳು ಬೆಳೆಸಲು ತಿಳಿಸುವ ಜಾತಿಯ ಸಸಿಗಳು 14"*20" ಅಳತೆಯ ಚೀಲಗಳಲ್ಲಿ ಮಿಶ್ರ ಜಾತಿಯ ಸಸಿಗಳು, ಆಲ, ಉರುವಲು ಜಾತಿ, ಬೆತ್ತ ಹಾಗೂ ಬಾಂಬೂ ಇತ್ಯಾದಿ ಸಸಿಗಳನ್ನು ನೆಟ್ಟು ಬೆಳೆಸಬೇಕಾಗುತ್ತದೆ.

3) ಸಸಿಗಳನ್ನು ಬೆಳೆಸುವ ಕಾಮಗಾರಿಗಳನ್ನು ಋತುಮಾನಕ್ಕನುಗುಣವಾಗಿ ಕೈಗೊಳ್ಳಬೇಕಾಗಿರುವುದರಿಂದ ವಿವಿಧ ಅಳತೆ ಸಸಿಗಳನ್ನು ನಿಗಧಿಪಡಿಸಿದ ಮಾಹೆಯಲ್ಲಿಯೇ ಬೆಳೆಸಬೇಕಾಗುವುದರಿಂದ, ಟೆಂಡರ್ ಮತ್ತು ಕರಾರು ಪ್ರಕ್ರಿಯೆ ವಿಳಂಬವಾದಲ್ಲಿ ಇಲಾಖೆ ಮುಖಾಂತರ ಸಸಿಗಳನ್ನು ಬೆಳೆಸಲು ಕ್ರಮ ಜರುಗಿಸಲಾಗುವುದು. ಅದಕ್ಕೆ ತಗುಲಿದ ವೆಚ್ಚವನ್ನು ಟೆಂಡರ್ ಮೊತ್ತದಿಂದ ಕಡಿತಗೊಳಿಸಿ ಇಲಾಖಾದರದನ್ವಯದಲ್ಲಿಯೇ ಪಾವತಿಗೆ ಕ್ರಮವಹಿಸಲಾಗುವುದು. ನಂತರ ಸದರಿ ಸಸಿಗಳ ನಿರ್ವಹಣೆಯನ್ನು ಅಂದಾಜು ಪಟ್ಟಿಯ ನಿಯಮಾನುಸಾರ ನಿರ್ವಹಣೆ ಮಾಡತಕ್ಕದ್ದು. ನಂತರ ನಿಮ್ಮ ಅನುಮೋದಿತ ಟೆಂಡರ್ ದರದನ್ವಯ ಪಾವತಿಗೆ ಕ್ರಮವಹಿಸಲಾಗುವುದು.

4) ಟೆಂಡರ್ ಪ್ರಕಟಣೆಯ ಯಾವುದೇ ನಿಯಮಗಳನ್ನು ಉಲ್ಲಂಘಿಸಿದಲ್ಲಿ ಮರು ಟೆಂಡರ್ ಕರೆದು ಕೆಲಸ ಮಾಡಿಸುವ, ಯಾವುದೇ ಕಾರಣವನ್ನು ನೀಡದೆ ಟೆಂಡರನ್ನು ರದ್ದು ಪಡಿಸುವ ಅಧಿಕಾರವು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮಲೈ ಮಹದೇಶ್ವರ ವನ್ಯಜೀವಿ ವಿಭಾಗ, ಕೊಳ್ಳೇಗಾಲ ಇವರಿಗೆ ಇರುತ್ತದೆ.

5) ಟೆಂಡರುದಾರರು ಆದಾಯ ತೆರಿಗೆ, ಜಿಎಸ್‌ಟಿ, ವೃತ್ತಿ ತೆರಿಗೆ ಹಾಗೂ ತೀರುವಳಿ ಪತ್ರಗಳನ್ನು ಸಂಬಂಧಿಸಿದ ಇಲಾಖೆಗಳಿಂದ ಪಡೆದು ಟೆಂಡರಿನ ಜೊತೆಯಲ್ಲಿ ಲಗತ್ತಿಸಿರಬೇಕು:

6) ಟೆಂಡರ್‌ದಾರರು ತಮ್ಮ ದರವನ್ನು ನಮೂದಿಸುವಾಗ ಪ್ರತಿ ಕಾಮಗಾರಿಗೆ ಇಲಾಖಾ ಧರದ ಮೇಲೆ ಶೇಕಡವಾರು ಇಷ್ಟು ಹೆಚ್ಚು, ಕಡಿಮೆ ಅಥವಾ ಎಸ್‌ಎಸ್‌ಆರ್ ದರಕ್ಕನುಗುಣವಾಗಿ ಎಂದು ದರವನ್ನು ಸ್ಪಷ್ಟವಾಗಿ ಅಂಕಿ ಮತ್ತು ಅಕ್ಷರಗಳಲ್ಲಿ ನಮೂದಿಸಬೇಕು.

7) ಒಂದು ವೇಳೆ ಮೇಲೆ ತಿಳಿಸಿದ ದಿನಾಂಕಗಳು ರಜಾ ದಿನಗಳಾಗಿದ್ದಲ್ಲಿ ಮುಂದಿನ ಕೆಲಸದ ದಿನವನ್ನು ಗಣನೆಗೆ ತೆಗೆದುಕೊಳ್ಳುವುದು.

8) **ಸದರಿ ಟೆಂಡರ್ ಕಾಮಗಾರಿ ಕೆಲಸಕ್ಕಾಗಿ ತೋರಿಸಲಾದ ಯುನಿಟ್ಟುಗಳು 2026–27 ನೇ ಸಾಲಿಗೆ ಅನುದಾನ ನಿರೀಕ್ಷಣೆಯ ಮೇರೆಗೆ ಇರುತ್ತಿದ್ದು ನಮೂದಿಸಲಾದ ಟೆಂಡರ ಮೊತ್ತ ಕೂಡ ಅಂದಾಜಿನದ್ದಾಗಿರುತ್ತದೆ.** ನೈಜ ಮೊತ್ತವನ್ನು ಸರ್ಕಾರದಿಂದ ಅನುದಾನ ಬಿಡುಗಡೆ ನಂತರ ಅವುಗಳ ಕ್ರಿಯಾಯೋಜನೆಗಳ ಮಂಜೂರು ನಂತರ ತಯಾರಿಸಿದ ಅಂದಾಜು ಪಟ್ಟಿಯ ಮೊತ್ತಕ್ಕೆ ಸೀಮಿತವಾಗಿರುತ್ತದೆ. ಮತ್ತು ಅನುದಾನ ಲಭ್ಯವಿಲ್ಲದ ಯುನಿಟ್ಟುಗಳ ಕೆಲಸವನ್ನು ರದ್ದುಪಡಿಸುವ ಅಧಿಕಾರವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮಲೈ ಮಹದೇಶ್ವರ ವನ್ಯಜೀವಿ ವಿಭಾಗ, ಕೊಳ್ಳೇಗಾಲ ರವರು ಹೊಂದಿರುತ್ತಾರೆ. ಒಂದು ವೇಳೆ ಅನುದಾನ ಬಿಡುಗಡೆಯಾಗದಿದ್ದಲ್ಲಿ ಟೆಂಡರನ್ನು ಅಥವಾ ಕಾಮಗಾರಿಯನ್ನು ಯಾವುದೇ ಅವಧಿಯಲ್ಲಿ ರದ್ದುಪಡಿಸಬಹುದಾಗಿರುತ್ತದೆ ಮತ್ತು ವಲಯವಾರು

ಕಾಮಗಾರಿಗಾಗಿ ನಮೂದಿಸಿದ ಯುನಿಟ್ಟುಗಳ ಕೆಲಸಗಳು ಬೇರೆ ವಲಯಗಳಿಗೆ ವರ್ಗಾಯಿಸುವ ಪ್ರಮೇಯ ಬಂದಾಗ ಅದಕ್ಕನುಗುಣವಾಗಿ ಗುತ್ತಿಗೆದಾರರು ಕೆಲಸ ನಿರ್ವಹಿಸಲು ಬದ್ಧರಾಗಿರತಕ್ಕದ್ದು.

**9) ಮೇಲ್ಕಂಡ ನೆಡುತೋಪು ಬೆಳೆಸುವ ಕಾಮಗಾರಿಗಳಿಗೆ ಅವಶ್ಯಕತೆ ಇರುವ ಸಸಿಗಳನ್ನು ಋತುಮಾನಕ್ಕನುಗುಣವಾಗಿ ಉತ್ತಮ ಸಸಿಗಳನ್ನು ಬೆಳೆಸಬೇಕಾಗಿರುತ್ತದೆ ಆದ್ದರಿಂದ ಸದರಿ 14"*20" ಅಳತೆಯ ಚೀಲಗಳಲ್ಲಿ ಉತ್ತಮ ಸಸಿಗಳನ್ನು ಬೆಳೆಸಲು ಇಲಾಖೆಯು ಕ್ರಮವಹಿಸಿದಲ್ಲಿ ಸದರಿ ವೆಚ್ಚವನ್ನು ಹೊರತುಪಡಿಸಿ, ಉಳಿದಂತೆ ಸಸಿಗಳನ್ನು ಟೆಂಡರ್ ನಿಯಮಾನುಸಾರ ಸಸಿಗಳನ್ನು ನಿರ್ವಹಿಸಿ ವೆಚ್ಚವನ್ನು ಭರಿಸಲು ಬದ್ದರಿರಬೇಕು.**

10) ಟೆಂಡರ್‌ದಾರರು ಎಸ್.ಎಸ್.ಆರ್.ಗಿಂತ ಕಡಿಮೆ ದರವನ್ನು ಬಿಡ್ಡಿಂಗ್ ಮಾಡಿದಲ್ಲಿ ವ್ಯತ್ಯಾಸದ ಹಣವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮಲೈ ಮಹದೇಶ್ವರ ವನ್ಯಜೀವಿ ವಿಭಾಗ, ಕೊಳ್ಳೇಗಾಲ ಇವರ ಹೆಸರಿನಲ್ಲಿ ಎಫ್‌ಡಿಆರ್ ಮಾದರಿಯಲ್ಲಿ ಕರಾರು ಒಪ್ಪಂದ ಮಾಡಿಕೊಳ್ಳುವ ಮುನ್ನ ಠೇವಣಿ ಇಡುವುದು. ಈ ಸಂಬಂಧ ಯಾವುದೇ ಕೋರಿಕೆಗಳನ್ನು ಪರಿಗಣಿಸಲಾಗುವುದಿಲ್ಲ. ಟೆಂಡರು ರೀತ್ಯಾ ವಹಿಸಿದ ಕೆಲಸವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ನಂತರ ಠೇವಣಿ ಹಣವನ್ನು ನಿಯಮಾನುಸಾರ ಹಿಂದಿರುಗಿಸಲಾಗುವುದು.

**11) ಅರಣ್ಯ ಇಲಾಖೆ ಕಾಮಗಾರಿಗಳು ಮಳೆಯಾಧಾರಿತ ಹಾಗೂ ಋತುಮಾನದ ಕೆಲಸಗಳಾಗಿರುವುದರಿಂದ ಮಳೆ ಬಿದ್ದ ಕೂಡಲೇ ಸಸಿಗಳನ್ನು ಬೆಳೆಸುವ ಕೆಲಸವನ್ನು, ಸಸಿಗಳಿಗೆ ನೀರುಣಿಸುವ ಕೆಲಸಗಳನ್ನು ಒತ್ತುವರಿ ತಡೆಗಟ್ಟುವ ನಿಟ್ಟಿನಲ್ಲಿ ನೆಡುತೋಪು ಬೆಳೆಸುವ ಕಾಮಗಾರಿಗಳನ್ನು ಟೆಂಡರ್ ಅನುಮೋದನೆಯಾಗುವವರೆಗೂ ಇಲಾಖಾ ಮುಖಾಂತರ ಕೈಗೊಳ್ಳಲು ಕ್ರಮವಹಿಸಿದಲ್ಲಿ ಈ ರೀತಿ ಕೈಗೊಂಡ ಕೆಲಸಗಳನ್ನು ಹೊರತುಪಡಿಸಿ ಗುತ್ತಿಗೆದಾರರು ಉಳಿದ ಕೆಲಸಗಳನ್ನು ಕೈಗೊಳ್ಳಬೇಕಾಗುತ್ತದೆ. ಇಲಾಖಾ ಮುಖಾಂತರ ಕೈಗೊಳ್ಳಲಾದ ವೆಚ್ಚವನ್ನು ಇಲಾಖಾ ದರದಲ್ಲಿಯೇ ಪಾವತಿಗೆ ಕ್ರಮವಹಿಸಲಾಗುವುದು, ಉಳಿದಂತೆ ಟೆಂಡರ್ ದಾರರು ನಿರ್ವಹಿಸುವ ಕಾಮಗಾರಿಗೆ ವೆಚ್ಚವನ್ನು ಟೆಂಡರ್ ಅನುಮೋದಿತ ದರದಲ್ಲಿ ಭರಿಸಲಾಗುವುದು. ಸದರಿ ಅಂಶವನ್ನು ಗಮನದಲ್ಲಿಟ್ಟುಕೊಂಡು ಟೆಂಡರ್‌ದಾರರು ಟೆಂಡರ್‌ನಲ್ಲಿ ಭಾಗವಹಿಸುವುದು.**

12) ಈ ವಿಷಯದಲ್ಲಿ ಅಂತಿಮವಾಗಿ ಯಾವುದೇ ತಿದ್ದುಪಡಿಯನ್ನು ಮಾಡುವ, ನಿಯಮ ನಿಬಂಧನೆ ಸೇರಿಸುವ ಅಧಿಕಾರ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮಲೈ ಮಹದೇಶ್ವರ ವನ್ಯಜೀವಿ ವಿಭಾಗ, ಕೊಳ್ಳೇಗಾಲ ಇವರಿಗೆ ಇರುತ್ತದೆ. ಗುತ್ತಿಗೆದಾರರು ಇದಕ್ಕೆ ಬದ್ಧರಾಗಿರಬೇಕು.

13) ಅಪ್ರಾಪ್ತ ವಯಸ್ಕರು ಮತ್ತು ಕಾನೂನಿನನ್ವಯ ಅನರ್ಹರೆಂದು ತೀರ್ಮಾನಿಸಲ್ಪಟ್ಟ ವ್ಯಕ್ತಿಗಳಿಂದ ಟೆಂಡರ್‌ನ್ನು ಸ್ವೀಕರಿಸಲಾಗುವುದಿಲ್ಲ. ಒಂದು ವೇಳೆ ಇಲಾಖೆಗೆ ತಿಳಿಸದಂತೆ ಸದರಿ ವ್ಯಕ್ತಿಗಳು ಟೆಂಡರ್ ಹಾಕಿ ನಂತರ ಅದು ತಿಳಿದಲ್ಲಿ ಅಂತಹವರ ಗುತ್ತಿಗೆಯನ್ನು ಅನೂರ್ಜಿತಗೊಳಿಸಲಾಗುವುದು ಮತ್ತು ಅವರು ಇಲಾಖೆಯಲ್ಲಿ ಇಟ್ಟಿರುವ ಇ.ಎಂ.ಡಿ. ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

14) ಮೇಲ್ಕಂಡ ಕಾಮಗಾರಿಗಳಿಗೆ ಯಾವುದೇ ಮುಂಗಡ ಹಣವನ್ನು ಪಾವತಿ ಮಾಡಲಾಗುವುದಿಲ್ಲ. ಕೆಲಸಗಳನ್ನು ಆಯಾಯ ವಲಯಕ್ಕೆ ಸಂಬಂಧಿಸಿದಂತೆ ವಲಯ ಅರಣ್ಯಾಧಿಕಾರಿಗಳಿಂದ ಮತ್ತು ಸಂಬಂದಪಟ್ಟ ಉಪ-ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರ ಪರಿಶೀಲನೆ ಹಾಗೂ ದೃಢೀಕರಣವನ್ನು ಅನುಸರಿಸಿ ಬಿಲ್ಲನ್ನು ಪಾವತಿ ಮಾಡಲಾಗುವುದು ಹಾಗೂ ಪಾವತಿಸುವ ಹಣದ ಮೇಲೆ ಚಾಲ್ತಿಯಲ್ಲಿರುವ ತೆರಿಗೆಗಳನ್ನು ಕಡಿತ ಮಾಡಲಾಗುವುದು. ಸರ್ಕಾರದಿಂದ ಹಣ ಬಿಡುಗಡೆ ತಡವಾದ ಪದಲ್ಲಿ ಅಂತಹ ಹಣ ಪಾವತಿಗೆ ಯಾವುದೇ ತರಹದ ಬಡ್ಡಿ ನೀಡಲಾಗುವುದಿಲ್ಲ.

15) ಯಶಸ್ವಿ ಟೆಂಡರ್‌ದಾರರು ಆದೇಶ ಕೊಟ್ಟ 7 ದಿವಸಗಳೊಳಗಾಗಿ ಸರ್ಕಾರ ನಿಗಧಿಪಡಿಸಿದ ಮೊತ್ತಕ್ಕೆ ಛಾಪಾ ಕಾಗದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮಲೈ ಮಹದೇಶ್ವರ ವನ್ಯಜೀವಿ ವಿಭಾಗ, ಕೊಳ್ಳೇಗಾಲ ರವರ ಸಮಕ್ಷಮ ಕರಾರು ಒಪ್ಪಂದವನ್ನು ಮಾಡಿಕೊಳ್ಳತಕ್ಕದ್ದು.

16) ಯಶಸ್ವಿ ಬಿಡ್ಡುದಾರರು ಟೆಂಡರ್ **ಮೊತ್ತಕ್ಕೆ ಶೇಕಡ 5 ರಷ್ಟು ಮೊತ್ತವನ್ನು ಭದ್ರತಾ ಠೇವಣಿಯಾಗಿ** ಎಫ್‌ಡಿಆರ್ ರೂಪದಲ್ಲಿ ಕರಾರು ಮಾಡಿಕೊಳ್ಳುವ ಸಮಯದಲ್ಲಿ ಸಲ್ಲಿಸುವುದು.

17) ಕರಾರು ಒಪ್ಪಂದ ಮಾಡಿಕೊಂಡ ಗುತ್ತಿಗೆದಾರರು ಆದೇಶ ಕೊಟ್ಟ 7 ದಿನಗಳ ಒಳಗಾಗಿ ಸಂಬಂಧಪಟ್ಟ ವಲಯ ಅರಣ್ಯಾಧಿಕಾರಿಗಳ ಮಾರ್ಗದರ್ಶನದಲ್ಲಿ ಋತುಮಾನಕ್ಕೆ ಅನುಗುಣವಾಗಿ ನೆಡುತೋಪು ಬೆಳೆಸುವ ಕಾಮಗಾರಿ, ಸಸಿಗಳನ್ನು ಬೆಳೆಸುವುದು ಇತರೆ ಮಂಜೂರಾದ ಅಂದಾಜು ಪಟ್ಟಿಗಳಲ್ಲಿನ ಕಾಮಗಾರಿಗಳನ್ನು ನಿರ್ವಹಿಸತಕ್ಕದ್ದು.

18) ಪೂರ್ಣಗೊಂಡ ಕಾಮಗಾರಿಗಳಿಗೆ ಅನುದಾನದ ಲಭ್ಯತೆ ಅನುಸಾರ ಹಣ ಪಾವತಿಸಲಾಗುವುದು. ಭಾಗಶಃ ಮಾಡಿದ ಕಾಮಗಾರಿಗಳಿಗೆ ಬಿಲ್ಲುಗಳನ್ನು ಪಾವತಿಸಲಾಗುವುದಿಲ್ಲ. ಕಾಮಗಾರಿಗಳನ್ನು ವಲಯ ಅರಣ್ಯಾಧಿಕಾರಿ ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಪರಿಶೀಲಿಸಿ ದೃಢೀಕರಿಸಿದ ನಂತರ ಪೂರ್ಣಗೊಂಡ ಕಾಮಗಾರಿಗಳಿಗೆ ಸಾದಿಲ್ವಾರು ಬಿಲ್ಲು ಮೂಲಕ ಹಣ ಪಾವತಿ ಮಾಡಲಾಗುವುದು ಹಾಗೂ ಪಾವತಿಸುವ ಹಣದ ಮೇಲೆ ಆದಾಯ ತೆರಿಗೆ ಹಾಗೂ ಚಾಲ್ತಿಯಲ್ಲಿರುವ ಸಂಬಂಧಿಸಿದ ಇತರೇ ತೆರಿಗೆಗಳನ್ನು ಕಡಿತ ಮಾಡಲಾಗುವುದು.

19) ಟೆಂಡರ್‌ದಾರರು ಟೆಂಡರ್ ಪ್ರಕಟಣೆಯ ಮುಂಚಿತವಾಗಿ ಅರಣ್ಯ ಗುತ್ತಿಗೆದಾರರಾಗಿ ಹೆಸರು ನೊಂದಾಯಿಸಿಕೊಳ್ಳುವುದು ಮತ್ತು ಟೆಂಡರ ದಿನದಂದು ಗುತ್ತಿಗೆದಾರರ ನೋಂದಣಿಗೆ ಅವಕಾಶವಿರುವುದಿಲ್ಲ.

20) ಟೆಂಡರ್ ಮಂಜೂರಾತಿಯ ಬಗ್ಗೆ ಮೇಲಾಧಿಕಾರಿಗಳಿಂದ ಆದೇಶ ಬಂದ ನಂತರ ತಿಳಿಸಲಾಗುವುದು. ಅಲ್ಲಿಯವರೆಗೆ 2ನೇ ಅತಿ ಕಡಿಮೆ ಟೆಂಡರ್ ದರ ನಮೂದಿಸಿರುವ ಗುತ್ತಿಗೆದಾರರ ಇ.ಎಂ.ಡಿ. ಹಣವನ್ನು ಹಿಂತಿರುಗಿಸಲಾಗುವುದಿಲ್ಲ. ಹಾಗೂ ಈ ಅವಧಿಯಲ್ಲಿ ಟೆಂಡರನ್ನು ವಾಪಸ್ಸು ಪಡೆಯಲು ಅವಕಾಶವಿರುವುದಿಲ್ಲ.

21) ಅತೀ ಕಡಿಮೆ ಒಂದೇ ದರವನ್ನು ಸೂಚಿಸಿರುವ ಟೆಂಡರ್ ಒಂದಕ್ಕಿಂತ ಹೆಚ್ಚು ಬಂದಲ್ಲಿ ಅದರಲ್ಲಿ ಒಂದು ಟೆಂಡರನ್ನು ಮಾತ್ರ ಒಪ್ಪಿಕೊಳ್ಳುವ ಅಧಿಕಾರ ಇಲಾಖೆಗೆ ಇರುತ್ತದೆ. ಅಲ್ಲದೇ ಅಂತಹ ಟೆಂಡರ್‌ದಾರರೊಂದಿಗೆ ರಾಜಿ ಒಪ್ಪಂದ ಇಲ್ಲವೇ ಚೀಟಿ ಎತ್ತುವ ಮೂಲಕ ತೀರ್ಮಾನ ಕೈಗೊಳ್ಳಲಾಗುವುದು.

22) ಗುತ್ತಿಗೆದಾರರು ಗುತ್ತಿಗೆಯನ್ನು ಅಥವಾ ಯಾವುದೇ ಭಾಗವನ್ನು ಇತರರಿಗೆ ಉಪ ಗುತ್ತಿಗೆ ನೀಡುವಂತಿಲ್ಲ. ಹಾಗೂ ವರ್ಗಾಯಿಸುವಂತಿಲ್ಲ.

23) ಗುತ್ತಿಗೆ ಕೆಲಸಕ್ಕೆ ಯಾವುದೇ ಮುಂಗಡ ಹಣ ಪಾವತಿಸಲಾಗುತ್ತಿಲ್ಲ. ಕೈಗೊಂಡ ಕೆಲಸ ಸಮರ್ಪಕವಾಗಿರುವ ಬಗ್ಗೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ವಲಯ ಅರಣ್ಯಾಧಿಕಾರಿಗಳ ಕ್ಷೇತ್ರ ತಪಾಸಣೆ ಎಫ್‌ಎನ್‌ಬಿ/ಎಂಬಿ ಮೆಜರಮೆಂಟ ಪ್ರಕಾರ ಹಣ ಪಾವತಿಗೆ ಕ್ರಮ ಕೈಗೊಳ್ಳಲಾಗುವುದು.

24) ಗುತ್ತಿಗೆ ಅವಧಿ ಮುಗಿದ ನಂತರ ಹಾಗೂ ಕಾಮಗಾರಿಗಳು ಪೂರ್ಣಗೊಂಡ ನಂತರ ವಲಯ ಅರಣ್ಯಾಧಿಕಾರಿ ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಿಂದ ಕಾಮಗಾರಿ ತೃಪ್ತಿಕರವಾಗಿ ಪೂರ್ಣಗೊಂಡಿರುವ ಬಗ್ಗೆ ವರದಿ ಮತ್ತು ಮುಕ್ತಾಯ ವರದಿ ಸಲ್ಲಿಕೆಯಾದ ನಂತರ ಭದ್ರತಾ ಠೇವಣಿ ಹಣವನ್ನು ಮೇಲಾಧಿಕಾರಿಗಳಿಂದ ಮಂಜೂರಾತಿ ಪಡೆದು ಹಿಂತಿರುಗಿಸಲಾಗುವುದು

25) ಕಾಮಗಾರಿಯು ಪ್ರಗತಿಯಲ್ಲಿರುವಾಗ ಯಾವುದೇ ಕೂಲಿಯಾಳುಗಳು ದೈಹಿಕವಾಗಿ ಗಾಯಗೊಂಡಲ್ಲಿ ಕಾರ್ಮಿಕರ ಶುಶ್ರೂಷೆಗಾಗಿ ತಗಲುವ ವೆಚ್ಚ ಅಥವಾ ಮರಣ ಹೊಂದಿದಲ್ಲಿ ಅಂತಹ ಪ್ರಕರಣಗಳಿಗೆ ಪರಿಹಾರ ಧನ ನೀಡುವ ಸಂಪೂರ್ಣ ಹೊಣೆ ಗುತ್ತಿಗೆದಾರರದೇ ಆಗಿರುತ್ತದೆ. ಇಂಥಹ ಪ್ರಕರಣಗಳಿಗೆ ಇಲಾಖೆಯು ಹೊಣೆ ಇರುವುದಿಲ್ಲ.

26) ನಿಗಧಿತ ಕಾಲಾವಧಿಯೊಳಗಾಗಿ ಗುತ್ತಿಗೆದಾರರು ಕಾಮಗಾರಿಗಳನ್ನು ಪೂರ್ಣಗೊಳಿಸತಕ್ಕದ್ದು. ಯಾವುದೇ ಕಾರಣಕ್ಕೂ ಕಾಲಾವಧಿಯನ್ನು ವಿಸ್ತರಿಸಲಾಗುವುದಿಲ್ಲ.

27) ಗುತ್ತಿಗೆದಾರರ ಅಧೀನದಲ್ಲಿ ಕಾರ್ಯ ನಿರ್ವಹಿಸುವ ಕಾರ್ಮಿಕರು ಅರಣ್ಯ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿದ್ದಲ್ಲಿ ಅಂತಹವರ ವಿರುದ್ದ ಹಾಗೂ ಗುತ್ತಿಗೆದಾರರ ವಿರುದ್ದ ನಿಯಮಾನುಸಾರ ಕ್ರಮ ಜರುಗಿಸಲಾಗುವುದು.

28) ಗುತ್ತಿಗೆದಾರನು ಕೂಲಿ ಕಾರ್ಮಿಕರ ನಿಯೋಜನೆಗೆ ಸಂಬಂಧಿಸಿದಂತೆ ಕೆಳಕಂಡ ಶಾಸನಗಳಿಗೆ ಬದ್ಧನಾಗಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು. i) Work mans Compensation Act 1923, ii) Payment of wages Act 1935, iii) Minimum wage Act 1948, iv) Child labour Act 1938 v) Employer's liability Act 1938, vi) Other Acts of Central & State that may applicable time to time.

29) ಟೆಂಡರ್ ಒಪ್ಪಂದ/ಕರಾರಿನಿಂದ ಉದ್ಭವಿಸಬಹುದಾದಂತಹ ಯಾವುದೇ ವ್ಯಾಜ್ಯ ಅಥವಾ ವಿವಾದ ಕ್ಲೇಮುಗಳನ್ನು ಪರಿಹರಿಸಿಕೊಳ್ಳುವುದಕ್ಕಾಗಿ ಉಭಯ ಪಕ್ಷದವರು ಅಂತಹ ವಿವಾದವನ್ನು ಕರ್ನಾಟಕ Arbitration ಕೇಂದ್ರ (ದೇಶಿಯ, ಅಂತರ್‌ದೇಶಿಯ), ನಿಯಮಗಳು 2012 ರಡಿಯಲ್ಲಿ ನೇಮಕಗೊಂಡ ಒಬ್ಬರು ಅಥವಾ ಹಲವು ಪಂಚಾಯತ್‌ದಾರರ ಮೂಲಕ ಪರಿಹರಿಸಲು ಒಪ್ಪಿಕೊಳ್ಳಬೇಕಾಗುತ್ತದೆ.

30) ಟೆಂಡರ್ ಪ್ರಕಟಣೆಯ ಯಾವುದೇ ನಿಯಮಗಳನ್ನು ಉಲ್ಲಂಘಿಸಿದಲ್ಲಿ ಮರು ಟೆಂಡರ್ ಕರೆದು ಕೆಲಸ ಮಾಡಿಸುವ, ಯಾವುದೇ ಕಾರಣವನ್ನು ನೀಡದೆ ಟೆಂಡರನ್ನು ರದ್ದು ಪಡಿಸುವ ಅಧಿಕಾರವು ಈ ಕೆಳ ಸಹಿದಾರರಿಗಿರುತ್ತದೆ.

31) ನೆಡುತೋಪು ಕಾಮಗಾರಿ ಜೊತೆಗೆ 14"*20" ಅಳತೆಯ ಸಸಿಗಳನ್ನು ಬೆಳೆಸುವುದು ಕಾಲಮಿತಿ ಮತ್ತು ಋತುಮಾನಕ್ಕೆ ತಕ್ಕಂತೆ ನಿಗಧಿತ ಸಮಯಗಳಲ್ಲಿ ಪೂರ್ಣಗೊಳಿಸುವುದು. ವಿಫಲರಾದಲ್ಲಿ ಅಂತಹ ಕಾಮಗಾರಿಗಳನ್ನು ಇಲಾಖಾ ಮೂಲಕ ನಿರ್ವಹಿಸಲಾಗುವುದು. ಹಾಗೂ ಸದರಿ ಗುತ್ತಿಗೆದಾರರನ್ನು ಕಪ್ಪು ಪಟ್ಟಿಯಲ್ಲಿ ಸೇರಿಸಿ ಮುಂದಿನ ಯಾವುದೇ ಇಲಾಖಾ ಟೆಂಡರ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ನೀಡುವುದಿಲ್ಲ. ಹಾಗೂ ಇ.ಎಂ.ಡಿ./ಭದ್ರತಾ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು, ಉಳಿದ ಕಾಮಗಾರಿ ಇಲಾಖಾ ಮೂಲಕ ನಿರ್ವಹಿಸಿದಲ್ಲಿ ಹೆಚ್ಚು ವೆಚ್ಚವಾದರೆ ಅದನ್ನು ಟೆಂಡರದಾರರಿಂದ ವಸೂಲಿ ಮಾಡಲಾಗುವುದು.

32) ಈ ಕ್ರಮದಿಂದ ಇಲಾಖೆಗೆ ಆಗಬಹುದಾದ ನಷ್ಟವನ್ನು ಮೂಲ ವಿಜೇತ ಟೆಂಡರುದಾರರು ಕಟ್ಟಿ ಕೊಡಲು ವಿಫಲರಾದರೆ ಸದರಿ ಮೊತ್ತವನ್ನು ಕರ್ನಾಟಕ ಅರಣ್ಯ ಕಾಯ್ದೆ 1963 ಸೆಕ್ಷನ್ 109ರಂತೆ ಭೂಕಂದಾಯ ಬಾಕಿ ರೂಪದಲ್ಲಿ ವಸೂಲಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

33) ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಆದೇಶದ ಬಗ್ಗೆ ತೃಪ್ತಿ ಇಲ್ಲವಾದರೆ ಚಾಮರಾಜನಗರ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರಲ್ಲಿ ಮೇಲ್ಮನವಿ ಸಲ್ಲಿಸಬಹುದು ಹಾಗೂ ಅವರು ಕೊಡುವ ತೀರ್ಪು ಅಂತಿಮವಾದುದು.

34) ಟೆಂಡರನ್ನು ಅಂಗೀಕರಿಸುವ ಅಥವಾ ನಿರಾಕರಿಸುವ ಅಧಿಕಾರವನ್ನು ಈ ಕೆಳಸಹಿ ಮಾಡಿರುವವರಿಗೆ ಅಥವಾ ಮೇಲಾಧಿಕಾರಿಗಳಿಗೆ ಕಾಯ್ದಿರಿಸಲಾಗಿದೆ.

35) ಹೆಚ್ಚಿನ ವಿವರಗಳು ಬೇಕಾದಲ್ಲಿ ಈ ಕಛೇರಿಯಲ್ಲಿ ಅಥವಾ ವಲಯ ಅರಣ್ಯಾಧಿಕಾರಿಗಳ ಕಛೇರಿಯಲ್ಲಿ, ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ. ಸಂಪರ್ಕ ಮಾಡಬೇಕಾದ ದೂರವಾಣಿ ಸಂಖ್ಯೆ; 08224-252027

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಕೊಳ್ಳೇಗಾಲ ವನ್ಯಜೀವಿ ಉಪ ವಿಭಾಗ,
ಕೊಳ್ಳೇಗಾಲ.

## Tender Technical Qualification Criteria

| Sl. No. | Criterion | Criterion Type |
|---|---|---|
| 1 | Satisfactory completion of work as a prime contractor at least one similar work to an extent of 50% of the cost of the works (tendering amount) in any year in last five years (from 2021-22 to 2025-26<br>The work should be executed through Tender called by Eprocurement/Karnataka Public Procurement portal. | Past Experience certificate as Prime Contractor should be obtained from forest divisions duly signed by an officer not below the rank of DCF/equivalent officer |
| 2 | Financial Turnover capability for the year 2024-25 & 2025-26 They should be achieved in at least two financial years, a minimum annual financial turnover i.e., usually not less than two times the estimated amount under the contract. | Financial Status |
| 3. | Audited balance sheet for last three financial years (i.e. 2023-24, 2024-25 & 2025-26) with copies of Income Tax returns & balance sheet statement filed. | Financial Status |
| 4. | Liquid assets and / or availability of credit facilities of not less than Rupees (usually 30% of the amount of contract/estimate cost) for work costing. (Credit lines/letter of credit certificate from banks for meeting the fund requirement etc | Line of credit |
| 5 | GST Registration Certificate and returns filed for the year 2025-26 | GST Registration |
| 6. | Forest Contractor Registration Certificate in O/o Deputy Conservator of Forests Malai Mahadeshwara Wildlife Division, Kollegal/any other division for the year 2026-27 | Registration Certificate |

## Document/Evidence Required from the Bidder

| Sl No | Document Name | Document Type | Optional |
|---|---|---|---|
| 1 | Past Experience certificate as Prime Contractor | Technical_Bid | No |
| 2 | Audited balance sheet for last three financial years | Technical_Bid | No |
| 3 | Certificates from Nationalised banks for meeting the fund requirement Credit Lines/ Letter of Credit | Technical_Bid | No |
| 4 | Forest Contractor Registration Certificate in O/o Deputy Conservator of Forests Malai Mahadeshwara Wildlife Division, Kollegal/any other division for the year 2026-27 | Technical_Bid | No |
| 5 | Bidder should have valid CST/State VAT or TIN / GST Registration / PAN Card | Technical_Bid | No |

Asst. Conservator of Forests
Kollegal Wildlife Sub Division
Kollegal.